ಕೊತ್ತಂಬರಿ ಸೊಪ್ಪು ತಗೊಂಡುಬಾ ಎಂದು ಅಮ್ಮ ಹೇಳಿ ಕಳಿಸಿದರೆ ಪುದಿನ ಸೊಪ್ಪು ತಂದಿದ್ದೀಯಲ್ಲಾ.. ನಿನಗೆ ಬುದ್ಧಿ ಇಲ್ವಾ? ಎಲ್ಲಾದರೂ ದನ ಮೇಯಿಸೋಕೆ ಹೋಗು' ಎಂದು ಅಪ್ಪ ಮಗನನ್ನು ಜೋರಾಗಿ ಗದರಿಸಿದ.

ಮಗ ಕೂಲ್ ಆಗಿ ಹೇಳಿದ– ಅಪ್ಪಾ ನೀನೂ ಜತೆಗೆ ಬಾ.. ಹೋಗೋಣ. ಅದು ಪುದಿನ ಸೊಪ್ಪು ಅಲ್ಲ ಕರಿಬೇವು ಎಂದು ಅಮ್ಮ ಹೇಳಿದ್ದಾರೆ..!





ಕ್ಷೌರಿಕನೊಬ್ಬ ಸ್ವಾಮೀಜಿಯವರ ತಲೆ ಕೂದಲನ್ನು ಅಚ್ಚುಕಟ್ಟಾಗಿ ಕತ್ತರಿಸಿದ. ಆದರೆ ಹಣ ಪಡೆಯಲು ಒಪ್ಪಲಿಲ್ಲ. ಸ್ವಾಮೀಜಿಗಳಿಗೆ ಖುಷಿಯಾಗಿ 'ನಿನಗೇನು ಕೊಡಲಿ' ಎಂದು ಕೇಳಿದರು. 'ಏನೂ ಬೇಡ ಸ್ವಾಮೀಜಿ, ನಿಮ್ಮ ಆಶೀರ್ವಾದ ಸಾಕು' ಎಂದ ಕ್ಷೌರಿಕ. ಮರುದಿನ ಸ್ವಾಮೀಜಿ ಶಿಷ್ಯನೊಬ್ಬನ ಮೂಲಕ ಒಂದಿಷ್ಟು ಧಾರ್ಮಿಕ ಪುಸ್ತಕಗಳು ಮತ್ತು ಪ್ರಸಾದವನ್ನು ಕಳಿಸಿಕೊಟ್ಟರು.

ಎರಡು ದಿನಗಳ ನಂತರ ಸಬ್ ಇನ್ಸ್‌ಪೆಕ್ಟರ್ ಒಬ್ಬರು ಕ್ಷೌರಕ್ಕೆ ಬಂದರು. ಕ್ಷೌರದ ಬಳಿಕ ಅವರೂ ಖುಷಿಯಾಗಿ 'ಎಷ್ಟಾಯ್ತು' ಎಂದು ಕೇಳಿದರೆ, ಕ್ಷೌರಿಕ ಹಣ ಪಡೆಯಲು ಒಪ್ಪಲಿಲ್ಲ. 'ನೀವು ಈ ನಗರದಲ್ಲಿ ಶಾಂತಿ ಕಾಪಾಡುವವರು, ಹಣ ಬೇಡ' ಎಂದ. ಮರುದಿನ ಪೊಲೀಸನೊಬ್ಬ ಸಾಹೇಬರ ಪರವಾಗಿ ಒಂದು ಕೆಜಿ ಸ್ವೀಟ್ಸ್ ತಂದುಕೊಟ್ಟು ಹೋದ.

ಇನ್ನೆರಡು ದಿನಗಳ ಬಳಿಕ ಒಬ್ಬ ರಾಜಕಾರಣಿ ಕ್ಷೌರಕ್ಕೆ ಬಂದರು. ಹೇರ್‌ಕಟ್, ಶ್ಯಾಂಪೂ, ಫೇಸಿಯಲ್, ಮಸಾಜ್ ಎಲ್ಲ ಆದ ಬಳಿಕ ಕ್ಷೌರಿಕ ಹಣ ಪಡೆಯಲು ಒಪ್ಪಲಿಲ್ಲ. 'ಇರಲಿ ಬಿಡಿ ಸಾರ್. ನಿಮ್ಮಿಂದಾಗಿಯೇ ಈ ದೇಶ ನಡೀತಿದೆ, ನಿಮ್ಹತ್ರ ದುಡ್ಡು ತೆಗೆದುಕೊಳ್ಳುವುದು ಸರಿಯಲ್ಲ' ಎಂದ.

ಮರುದಿನ, ಕ್ಷೌರದ ಅಂಗಡಿಯ ಎದುರು ಹತ್ತು ಹನ್ನೆರಡು ರಾಜಕೀಯ ಮುಖಂಡರು ಬಂದು ಕ್ಷೌರಕ್ಕಾಗಿ ಕ್ಯೂ ನಿಂತರು!



ಟ್ಯಾಕ್ಸಿ ಮುಂದಕ್ಕೆ ಓಡುತ್ತಿತ್ತು. ಹಿಂದಿನ ಸೀಟಿನಲ್ಲಿ ಕುಳಿತಿದ್ದ ಪ್ರಯಾಣಿಕ ಏನನ್ನೋ ಹೇಳಲು ಡ್ರೈವರ್ ಹೆಗಲ ಮೇಲೆ ಕೈ ಇಟ್ಟ. ಬೆಚ್ಚಿ ಬಿದ್ದ ಟ್ಯಾಕ್ಸಿ ಚಾಲಕ ಕಿಟಾರನೆ ಕಿರುಚಿದ. ಟ್ಯಾಕ್ಸಿ ಅಡ್ಡಾದಿಡ್ಡಿ ಓಡಿ ಫುಟ್‌ಪಾತ್ ಮೇಲೇರಿ ನಿಂತಿತು. ಸದ್ಯ ಯಾರಿಗೂ ಏನೂ ಅಪಾಯವಾಗಲಿಲ್ಲ.

ಪ್ರಯಾಣಿಕ ನಾಚಿಕೊಂಡು ಡ್ರೈವರ್‌ನ ಕ್ಷಮೆ ಯಾಚಿಸಿ ಹೇಳಿದ– ಕ್ಷಮಿಸಿ, ಹೆಗಲ ಮೇಲೆ ಕೈ ಇಟ್ಟದ್ದರಿಂದ ನೀವು ಇಷ್ಟು ಗಾಬರಿ ಬೀಳುತ್ತೀರಿ ಎನ್ನುವುದು ಗೊತ್ತಾಗಲಿಲ್ಲ.

ಡ್ರೈವರ್ ಕೂಡಾ ವಿನಯದಿಂದ ಉತ್ತರಿಸಿದ– ಸಾರ್. ತಪ್ಪು ನಿಮ್ಮದಲ್ಲ, ನಾನಿವತ್ತು ಮೊದಲ ದಿನ ಟ್ಯಾಕ್ಸಿ ಓಡಿಸುತ್ತಿದ್ದೇನೆ. ಕಳೆದ 35 ವರ್ಷಗಳಿಂದ ನಾನು ಹೆಣ ಸಾಗಿಸುವ ವ್ಯಾನ್ ಓಡಿಸುತ್ತಿದ್ದೆ..!'

**(ಸಂಗ್ರಹ) ಡಿ.ಎನ್.ಶ್ರೀನಾಥ್**